# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

**ಸಿ.ಸಿ. ನಂಃ 21/2019**

**ಸಿ.ಡಬ್ಲೂಃ 03 ಪಿಡಬ್ಲೂಃ 02**

ಸಾಕ್ಷಿದಾರರ ಹೆಸರುಃ ಲಕ್ಷ್ಮಣ ಕಾಂಬಳೆ ತಂದೆಃ ಬಸಪ್ಪ
ವಯಸ್ಸುಃ 47 ವರ್ಷ
ಉದ್ಯೋಗಃ ಮುಖ್ಯಪೇದೆ ಹಡಗಲಿ ಪೊಲೀಸ್ ಠಾಣೆ
ಸಾಕೀನಃ ಹಡಗಲಿ.

ದಿಃ22-09-2025 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಸ.ಸ.ಅ ರವರಿಂದ ;

ನಾನು **2016** ರಿಂದ **2017** ರವೆರೆಗೆ ನಾನು ಹಿರೇಹಡಗಲಿ ಪೋಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕೆಲಸ ಮಾಡಿರುತ್ತೇನೆ.

**02.** ದಿಃ**27-08-2017** ರಂದು ಸಂಜೆ.**05.00** ಗಂಟೆ ಸುಮಾರಿಗೆ ಹಗರನೂರು ಗ್ರಾಮದ ಕರೆಯ ಏರಿಯ ಮೇಲೆ ಗಣೇಶ ವಿಸರ್ಜನೆಯ ಗಸ್ತು ಕರ್ತವ್ಯದಲ್ಲಿದ್ದಾಗ ಚಾ.ಸಾ.**11** ರವರು ಮಾನ್ಯರ ಮಸಲವಾಡ ಗ್ರಾಮದಲ್ಲಿ ಅಕ್ರಮ ಮಧ್ಯ ಮಾರಾಟ ಮಾಡುತ್ತಿರುವ ಕುರಿತು ಬಾತ್ಮಿ ಬಂದಿದ್ದು ದಾಳಿಗೆ ಹೋಗಲು ನನಗೆ, ಚಾ.ಸಾ.**1, 2, 4** ಮತ್ತು **5** ರವರಿಗೆ ತಿಳಿಸಿ ಸಂಜೆ.**05.30** ಗಂಟೆ ಸುಮಾರಿಗೆ ಮಾನ್ಯರ ಮಸಲವಾಡ ಗ್ರಾಮಕ್ಕೆ ನಮ್ಮ ಇಲಾಖಾ ವಾಹನದಲ್ಲಿ ಹೋಗಿದ್ದು, ಆಗ ಚಾ.ಸಾ.**04** ರವರಿಗೆ ಚಾ.ಸಾ.**11** ರವರು ದಾಳಿ ಮಾಡಲು ಇಬ್ಬರು ಪಂಚರನ್ನು ಕರೆದುಕೊಂಡು ಬರಲು ತಿಳಿಸಿದ್ದರಿಂದ ಅದರಂತೆ ಚಾ.ಸಾ.**6** ಮತ್ತು **7** ರವರನ್ನು ಪಂಚರನ್ನಾಗಿ ಕರೆದುಕೊಂಡು ಬಂದು ಚಾ.ಸಾ.**11** ರವರ ಮುಂದೆ ಹಾಜರುಪಡಿಸಿದ್ದು ಅವರಿಗೂ ಸಹ ಸದರಿ ವಿದ್ಯಮಾನವನ್ನು ತಿಳಿಸಿ ಸದರಿ ಗ್ರಾಮದ ಕುರಬಗೇರಿ ಓಣಿಗೆ ಹೋಗುವ ರಸ್ತೇಯಲ್ಲಿ, ವಾಹನವನ್ನು ನಿಲ್ಲಿಸಿ ಮರೆಮಾಚಿ ನಿಂತು ನೋಡಲಾಗಿ ನೀರಿನ ಟ್ಯಾಂಕ್ ಹತ್ತಿರ ಜನರು ಗುಂಪಾಗಿ ಸೇರಿದ್ದು ಕಂಡು ನಾವು ದಾಳಿ ಮಾಡಲು ಹೋದಾಗ ನಮ್ಮನ್ನು ನೋಡಿ ಅಲ್ಲಿ ಸೇರಿದ್ದ ಜನರು ಪರಾರಿಯಾಗಿರುತ್ತಾರೆ. ಆ ಸ್ಥಳದಲ್ಲಿ **180** ಎಮ್.ಎಲ್.ನ **20** ರಾಜಾ ವಿಸ್ಕೀಯ ಬಾಟಲಗಳು, **90** ಎಮ್.ಎಲ್.ನ ಬೆಂಗಳೂರು ಮಾಲ್ಟ್ ವಿಸ್ಕೀಯ **18** ಟೆಟ್ರಾಪ್ಯಾಕಗಳು ಹಾಗೂ ನಗದು ಹಣ ರೂ.**250/-** ದೊರೆತಿರುತ್ತದೆ. ಆಗ ಚಾ.ಸಾ.**11** ರವರು ಪಂಚರ ಸಮಕ್ಷಮ ಸಂಜೆ.**06.00** ರಿಂದ **07.00** ಗಂಟೆಯವರೆಗೆ ವಿದ್ಯುತ್ ದೀಪದ ಬೆಳಕಿನಲ್ಲಿ ಪಂಚನಾಮೆಯನ್ನು ತಯಾರಿಸಿರುತ್ತಾರೆ. ಸದರಿ ಮಧ್ಯದಿಂದ **1** ಬಾಟಲ ಮತ್ತು **1** ಪೌಚನ್ನು ಸ್ಯಾಂಪಲಗೆಂದು ತೆಗೆದು ಅವುಗಳನ್ನು ಸೀಲು ಮಾಡಿ ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿ ಉಳಿದ

ಮದ್ಯದ ಬಾಟಲ ಮತ್ತು ಪೌಚಗಳನ್ನು ರಸಾಯನಿಕ ಪರೀಕ್ಷೆಗಾಗಿ ಅಮಾನತ್ತುಪಡೆಸಿಕೊಂಡಿರುತ್ತಾರೆ. ನಂತರ ಮದ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಯ ಹೆಸರು ಸುಭಾಸ ಮತ್ತು ನಿಂಗಜ್ಜ ಎಂಬ ವ್ಯಕ್ತಿಗಳು ಎಂಬುದಾಗಿ ಚಾ.ಸಾ.**4** ರವರಿಗೆ ಮಾಹಿತಿ ಬಂದಿರುತ್ತದೆ. ನಂತರ ಚಾ.ಸಾ.**11** ರವರು ಪಂಚನಾಮೆ ಮುದ್ದೆಮಾಲಿನೊಂದಿಗೆ ಠಾಣೆಗೆ ವಾಪಸ ಬಂದು ಚಾ.ಸಾ.**10** ರವರಿಗೆ ಆರೋಪಿತರ ವಿರುದ್ಧ ದೂರು ದಾಖಲಿಸಿರುತ್ತಾರೆ. ಆ ದಿನ ಓಡಿ ಹೋಗಿದ್ದ ವ್ಯಕ್ತಿಗಳು ಈ ದಿನ ನ್ಯಾಯಾಲಯದ ಮುಂದೆ ಇದ್ದು ಅವರನ್ನು ನೋಡಿ ಗುರುತಿಸಿರುತ್ತೇನೆ. ನ್ಯಾಯಾಲಯದ ಮುಂದಿರುವ **19** ರಾಜಾ ವಿಸ್ಕೀಯ ಕಾಲಿ ಬಾಟಲಗಳು ಮತ್ತು ಬೆಂಗಳೂರು ಮಾಲ್ಟ್ ವಿಸ್ಕೀಯ **17** ಕಾಲಿ ಟೆಟ್ರಾಪ್ಯಾಕಗಳು ಇಂದು ನ್ಯಾಯಾಲಯದ ಮುಂದಿದ್ದು ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಒಟ್ಟಾಗಿ ಮು.ಮಾ.**01** ಎಂದು ಗುರುತಿಸಲಾಯಿತು, ಹಾಗೂ ನಗದು ಹಣ **100/-** ಮುಖಬೆಲೆಯ **2** ಮತ್ತು **50/-** ಮುಖಬೆಲೆಯ **1** ನೋಟನ್ನು ಒಟ್ಟು ರೂ.**250/-** ಈ ದಿನ ನ್ಯಾಯಾಲಯದ ಮುಂದೆ ಇದ್ದು ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅವುಗಳನ್ನು ಈಗ ಒಟ್ಟಾಗಿ ಮು.ಮಾ.**02** ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ.ಕೆ.ಕೆ. ವಕೀಲರಿಂದಃ

**03.** ಆ ದಿನ ದಾಳಿಗೆ ನಾವು **4** ಜನ ಹೋಗಿರುತ್ತೇವೆ. ನಾವು ಹೋದ ಇಲಾಖಾ ವಾಹನವನ್ನು ಚಾ.ಸಾ.**05** ರವರು ಚಲಾಯಿಸಿಕೊಂಡು ಬಂದಿರುತ್ತಾರೆ. ಮಸಲವಾಡದ ತೇರು ಬಿದಿಯಿಂದ **Over Head Tank** ಸುಮಾರು **300** ಮೀಟರ ದೂರವಾಗುತ್ತದೆ. ತೇರು ಬಿದಿಯ ಉತ್ತರಕ್ಕೆ **Over Head Tank** ಇರುತ್ತದೆ. ಅಲ್ಲಿ ಗುಂಪಾಗಿ ಇದ್ದ ಜನ ಎಷ್ಟು ಜನ ಇದ್ದರು ಮತ್ತು ಯಾರಾರು ಇದ್ದರು ಎಂದು ಹೇಳಲು ಆಗುವುದಿಲ್ಲ. ಆರೋಪಿತರ ಹೆಸರು ಹೇಳಿದ ಸಾರ್ವಜನಿಕರ ಹೆಸರನ್ನು ಹೇಳಲು ಆಗುವುದಿಲ್ಲ. ನ್ಯಾಯಾಲಯದ ಮುಂದೆ ಇರುವಂತಹ ಮುದ್ದೆಮಾಲುಗಳು ಹೊರಗಡೆ ಸಾಕಷ್ಟು ಸಿಗುತ್ತವೆ ಎಂದರೆ ಇರಬಹುದು.

**04.** ಮಸಲವಾಡದ **Over Head Tank** ಹತ್ತಿರ ಯಾವುದೇ ಛಾಯಾ ಚಿತ್ರಗಳನ್ನು ತೆಗೆದಿರುವುದಿಲ್ಲ. ಅಲ್ಲಿ ಛಾಯಾ ಚಿತ್ರಗಳನ್ನು ತೆಗೆದುಕೊಳ್ಳಲು ನಮಗೆ ತೊಂದರೆ ಇರಲಿಲ್ಲ ಎಂದರೆ ಸರಿ. ಸ್ಥಳದಲ್ಲಿ ಜಪ್ತು ಮಾಡಿದಂತಹ ಎಲ್ಲಾ ಟೆಟ್ರಾಪ್ಯಾಕಗಳು ಮತ್ತು ಬಾಟಲಗಳನ್ನು ರಸಾಯನಿಕ ಪರಿಕ್ಷೆಗೆ ಕಳುಹಿಸಿರುತ್ತೀರಾ ಎಂದರೆ

ಅದರಲ್ಲಿ ಒಂದೊಂದು ಮಾದರಿಗಾಗಿ ತೆಗೆದಿಟ್ಟುಕೊಂಡು ಉಳಿದದ್ದನ್ನೆಲ್ಲಾ ರಸಾಯನಿಕ ಪರಿಕ್ಷೇಗೆ ಕಳುಹಿಸಿರುತ್ತೇನೆ.

**05.** ಪಂಚರ ಒಟ್ಟು **2** ಸಹಿಗಳನ್ನು ಪಡೆದಿರುತ್ತೇನೆ. ಚಾ.ಸಾ.**06** ರವರ ಸಹಿಯನ್ನು ಮೊದಲು ಪಡೆದಿರುತ್ತೇವೆ. ಪಂಚರದ್ದು ಉಪನಾಯಕನಹಳ್ಳಿ ಆಗಿರುತ್ತದೆ. ಸದರಿ ಪಂಚರು ನಮ್ಮ ಠಾಣೆಯ ಅನೇಕ ಪ್ರಕರಣಗಳಲ್ಲಿ ಪಂಚರಾಗಿ ಸಹಿಯನ್ನು ಹಾಕಿರುತ್ತಾರೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಮಾಹಿತಿ ಇದ್ದರೂ ಸಹ ಮಾಹಿತಿ ಇಲ್ಲಾ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಾಹಿತಿ ಬಂದ ತಕ್ಷಣ ದಾಳಿಗೆ ಹೋಗುವ ಮುನ್ನ ಠಾಣೆಯಲ್ಲಿ ದಾಖಲಿಸಿರುತ್ತೀರಾ ಎಂದರೆ ಅದು ತನಿಖಾಧಿಕಾರಿಗಳಿಗೆ ಬಿಟ್ಟ ವಿಚಾರ.

**06.** ಆ ದಿನ ನಾವು ಹಗರನೂರು ಕೆರೆಯ ಹತ್ತಿರ ನಾವು ಗಸ್ತು ಕರ್ತವ್ಯ ಮಾಡುವ ಸಮಯದಲ್ಲಿ ಮಸಲವಾಡದ ಗ್ರಾಮದಲ್ಲಿ ಅಕ್ರಮ ಮಧ್ಯ ಮಾರಾಟ ಆಗುವ ಬಗ್ಗೆ ಮಾಹಿತಿ ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿ ನ ನಾನು ಚಾ.ಸಾ.**01** ರವರೊಂದಿಗೆ, ನಮ್ಮ ಸಿಬ್ಬಂಧಿ, ಮತ್ತು ಪಂಚರೊಂದಿಗೆ ಮಸವಾಡ ಗ್ರಾಮದ **Over Head Tank** ಹತ್ತಿರ ಆರೋಪಿತರು ಇದ್ದರು ನಮ್ಮನ್ನು ನೋಡಿ ಓಡಿ ಹೋದರು ಎನ್ನುವ ಮಾತು ಸುಳ್ಳು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಓಡಿ ಹೋದರು ಎಂದು ನುಡಿಯುತ್ತಾರೆ. ಅಲ್ಲಿ ಪಂಚರ ಸಮಕ್ಷಮ ಪಂಚನಾಮೆ ಮಾಡಿ, ಮುದ್ದೆ ಮಾಲು ಜಪ್ತು ಮಾಡಿಕೊಂಡು ಪಂಚರ ಸಹಿಯನ್ನು ಪಡೆದುಕೊಂಡಿರುತ್ತೇವೆ ಎನ್ನುವ ಮಾತು ಸುಳ್ಳು ಎಂದರೆ ಸರಿಯಲ್ಲ. ರಸಾಯನಿಕ ಪರೀಕ್ಷೆಗೆ ಮುದ್ದೆಮಾಲನ್ನು ಮಾದರಿಗಾಗಿ ತೆಗೆದು ಅಲ್ಲಿ **250/-** ರೂಪಾಯಿ ಹಣವನ್ನು ಜಪ್ತು ಮಾಡಿಕೊಂಡಿರುತ್ತೇವೆ ಎನ್ನುವ ಮಾತು ಸುಳ್ಳು ಎಂದರೆ ಸರಿಯಲ್ಲ. ಅಲ್ಲಿ ನೆರದಿದ್ದ ಸಾರ್ವಜನಿಕರು ಓಡಿ ಹೋದವರು ಸುಭಾಷ ಮತ್ತು ನಿಂಗಜ್ಜ ಎಂದು ಹೇಳಿತ್ತಾರೆ ಎನ್ನುವ ಮಾತು ಸುಳ್ಳು ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಕೂಡ ನನ್ನ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ, ನನ್ನ ಸಮಕ್ಷಮ

**Sd/-**
(ಶ್ರೀಮತಿ ಅಕ್ಷತಾ ಟಿ.)
ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ
ದಂಡಾಧಿಕಾರಿಗಳು., ಹಡಗಲಿ.